19. ಧಾರವಾಡ	133.21	48.19	48.19
20. ಗದಗ್	129.02	88.64	88.64
21. ಹಾವೇರಿ	110.62	72.01	72.01
22. ಕಾರವಾರ	91.77	44.61	44.64
23. ಗುಲ್ಬರ್ಗಾ	339.52	235.93	235.93
24. ರಾಯಚೂರು	219.76	102.92	102.92
25. ಕೊಪ್ಪಳ	95.74	52.33	52.33
26. ಬಳ್ಳಾರಿ	197.82	139.36	139.36
27. ಬೀದರ್	264.84	96.66	96.66
ಒಟ್ಟು	**4929.12**	**2690.07**	**2690.07**

ರೇಷ್ಮೆ ಸಂಪತ್ತು ಯೋಜನೆ

807 (1021) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ''ರೇಷ್ಮೆ ಸಂಪತ್ತು ಯೋಜನೆ'' ರಾಜ್ಯದಲ್ಲಿ ಎಂದಿನಿಂದ ಜಾರಿಗೆ ಬಂದಿದೆ.

ಆ) ಈ ಯೋಜನೆಗೆ ರಾಜ್ಯ ಸರ್ಕಾರ ಮಂಜೂರು ಮಾಡಿದ ಹಣವೆಷ್ಟು; ವಿವರ ನೀಡುವುದು;

ಇ) ಈವರೆವಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ವಿವರ ನೀಡುವುದು;

ಈ) ಈ ಯೋಜನೆಯಡಿಯಲ್ಲಿ ಹಾಲಿ ಪ್ರಯೋಜನ ಪಡೆದ ಫಲಾನುಭವಿಗಳೆಷ್ಟು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರೇಷ್ಮೆ ಸಂಪತ್ತು ಯೋಜನೆಯ ಕೆಲವು ಕಾರ್ಯಕ್ರಮಗಳು ಪ್ರಸಕ್ತ ವರ್ಷದಿಂದ ಜಾರಿಗೆ ಬಂದಿವೆ.

ಆ) 2000-01ನೇ ಸಾಲಿಗೆ ರೂ. 1.00 ಲಕ್ಷ ವರೆಗೆ ಒದಗಿಸಲಾಗಿತ್ತು. ಇಲಾಖೆಯ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಹಣದಿಂದ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.

ಇ) ರೇಷ್ಮೆ ಸಂಪತ್ತು ಯೋಜನೆಯ ಕಾರ್ಯಕ್ರಮಗಳು ಇಲಾಖೆಯ ಕಾರ್ಯಕ್ರಮಗಳಲ್ಲಿ ಸೇರಿರುವುದರಿಂದ, ರೇಷ್ಮೆ ಇಲಾಖೆಯ ಯೋಜನೆ ಯೋಜನೇತರ, ಮತ್ತು ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದ ಅಂದಾಜು ರೂ. 30.00 ಕೋಟಿಗಳಷ್ಟು ಹಣವನ್ನು ವೆಚ್ಚ ಮಾಡಲಾಗಿದೆ.

ಈ) ರೇಷ್ಮೆ ಸಂಪತ್ತು ಯೋಜನೆಯು ಇಲಾಖೆಯ ಕಾರ್ಯಕ್ರಮದೊಂದಿಗೆ ಸೇರಿರುವ ಕಾರಣ

ಪ್ರತ್ಯೇಕ ಫಲಾನುಭವಿಗಳು ಇರುವುದಿಲ್ಲ.

ಹೊಸ ವಸತಿ (ವಿದ್ಯಾರ್ಥಿನಿಲಯ) ನಿಲಯಗಳ ಪ್ರಾರಂಭ

808 (1022) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿಗಳಿಗಾಗಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಲಾಗಿತ್ತು?

ಆ) ಈವರೆಗೆ ಎಷ್ಟು ವಿದ್ಯಾರ್ಥಿ (ಹೊಸ) ನಿಲಯಗಳನ್ನು ಸ್ಥಾಪಿಸಲಾಗಿದೆ?

ಇ) ಮೆಟ್ರಿಕ್- ನಂತರದ ವಿದ್ಯಾರ್ಥಿನಿಯರಿಗಾಗಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಕಳೆದ ವರ್ಷ ಸರ್ಕಾರ ನಿರ್ಧರಿಸಿತ್ತು; ಈವರೆಗೆ ಎಷ್ಟು ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ?

ಈ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಯರಿಗಾಗಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಕಳೆದ ವರ್ಷ ಸ್ಥಾಪಿಸಲಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1999-2000ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗಾಗಿ ಒಟ್ಟು 45 ಹಾಗೂ ಪರಿಶಿಷ್ಟ ವರ್ಗದವರಿಗಾಗಿ 5 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತು.

ಆ) ಈವರೆಗೆ ಹೊಸದಾಗಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 45 ಹಾಗೂ ಪರಿಶಿಷ್ಟ ವರ್ಗದವರಿಗಾಗಿ 5 ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ.

ಇ) ಕಳೆದ ವರ್ಷ ಸರ್ಕಾರವು ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರಿಗಾಗಿ 8 ಕಾಲೇಜು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಗುರಿ ಹೊಂದಿದ್ದು, 8 ಕಾಲೇಜು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ.

ಈ) ಕಳೆದ ವರ್ಷದಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗಾಗಿ ಒಂದು ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗಿದೆ. ಕಳೆದ ವರ್ಷ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯರಿಗಾಗಿ 4 ಮೆಟ್ರಿಕ್-ಪೂರ್ವ ಮತ್ತು 8 ಕಾಲೇಜು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ

ಶಿಥಿಲಗೊಂಡ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಅವ್ಯವಹಾರ

809 (1025) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?